**ಸಾಕ್ಷಿಯನ್ನು ದಿಃ *25/06/2026* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲು : ಶ್ರೀ ಪಿಎಸಪಿ ಆರೋಪಿ ಪರ ವಕೀಲರಿಂದ.**

ಆರೋಪಿಗೆ ನೋಟೀಸು ಕೊಟ್ಟಿದ್ದು, ಅದು ಸ್ವೀಕರಿಸಿಲ್ಲ ಎಂಬ ಹಿಂಬರಹದೊಂದಿಗೆ ಬಂದಿರುತ್ತದೆ. ಆರೋಪಿಯು ರೂ.1,30,000/- ಜನೇವರಿ, ಫೆಬ್ರುವರಿ ಹಾಗೂ ಮಾರ್ಚ 2023 ರ ಮೂರು ತಿಂಗಳಿಗೆ ಅನ್ವಯವಾಗುವಂತೆ ಹಣ ತುಂಬಿದ್ದಾರೆ. 2024 ರ ಅಕ್ಟೋಬರ, ನವೆಂಬರ ಮತ್ತು ಡಿಸೆಂಬರ ಮಾಹೆಯಲ್ಲಿ ಕ್ರಮವಾಗಿ ರೂ.10 ಸಾವಿರ, 20 ಸಾವಿರ ಮತ್ತು 10 ಸಾವಿರಯಂತೆ ಹಣ ಪಾವತಿ ಮಾಡಿರುತ್ತಾರೆ. ಈಗ ನನಗೆ ತೋರಿಸಿದ ದಾಖಲೆಗಳು ನಮ್ಮ ಹಣಕಾಸು ಸಂಸ್ಥೆಯಿಂದ ಕೊಟ್ಟ ಎರಡು ಪಾಸಪುಸ್ತಕದ ದಾಖಲೆಗಳು ಎಂದರೆ ಸರಿ. ಸಾಕ್ಷಿಯು ಗುರುತಿಸಿದ ದಾಖಲೆಗಳನ್ನು ***ನಿ.ಡಿ.1 ಮತ್ತು 2*** ಎಂದು ಗುರುತಿಸಲಾಯಿತು. ನಿ.ಡಿ.1 ಮತ್ತು 2 ರ ಸೂಚನೆ 1 ರಲ್ಲಿ ಕಾಣಿಸಿರುವ ರಜಿಸ್ಟರ ಪುಸ್ತಕ ನಮ್ಮ ಸಂಸ್ಥೆಯಲ್ಲಿದೆ. ಅದರ ದಾಖಲೆಯನ್ನು ಹಾಜರುಪಡಿಸುತ್ತೇನೆ. ಸಾಲವನ್ನು ಒಂದು ವರ್ಷದಲ್ಲಿ ಹಿಂದುರಿಗಿಸಬೇಕೆಂದು ಕರಾರು ಮಾಡಿಕೊಂಡಿದ್ದೇವು. ದಿಃ18-10-2022 ರಂದು

ಸಾಲ ನೀಡಿದ್ದೇವೆ. ದಿಃ25-12-2024 ರ ಮೊದಲು ನಾನು ಹಣ ಪಾವತಿಸುವಂತೆ ಆರೋಪಿಗೆ ಕೇಳದೆ ಇರಲು ಕಾರಣವೆನೆಂದರೆ ಅವರು ಅಂಗಡಿ ಬಂದ ಮಾಡಿದರು ಎಂದು ಹೇಳುತ್ತಾರೆ. ಹಣ ಪಾವತಿಸಬೇಕಾಗಿರುವ, ಪಾವತಿಸಿರುವ ಕುರಿತಾದ ದಾಖಲೆಗಳನ್ನು ಹಾಜರುಪಡಿಸಿಲ್ಲ, ನಂತರ ಹಾಜರುಪಡಿಸುತ್ತೇನೆ.

ನಿ.ಪಿ.1 ನ್ನು ದಿಃ25-12-2024 ರಂದು ಕೊಟ್ಟಿದ್ದಾರೆ. ದಿಃ25-12-2024 ರಂದು ಆರೋಪಿಯು ಹಣ ತುಂಬಿದ್ದಾನೆ ಎಂದರೆ ಸರಿ. ಆರೋಪಿಯೂ ಹಣ ತುಂಬುತ್ತಿರುವಾಗಲೇ ನಿ.ಪಿ.1 ನ್ನು ಕೊಟ್ಟಿದ್ದಾರೆ. ನಿ.ಪಿ.1 ನ್ನು ಆರೋಪಿಯು ಭದ್ರತೆಗಾಗಿ ಕೊಟ್ಟಿದ್ದು ಅದನ್ನು ದುರುಪಯೋಗ ಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ರೂ.40 ಸಾವಿರ ರೂಪಾಯಿ ಹಣವನ್ನು ಈ ಪ್ರಕರಣ ದಾಖಲು ಮಾಡಿದ ನಂತರ ಕೊಟ್ಟಿದ್ದಾನೆ. ಆರೋಪಿಯು ಹಣ ಪಾವತಿಸಿದರು ಸಹ ಭದ್ರತೆಗಾಗಿ ಪಡೆದ ಚೆಕ್ಕನ್ನು ದುರುಪಯೋಗಪಡಿಸಿ ಸುಳ್ಳು ಪ್ರಕರಣ ದಾಖಲಿಸಿ ಅದಕ್ಕೆ ಅನುಗುಣವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

***ಮರು ವಿಚಾರಣೆ ಃ ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.